# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 206 |
| ಸದಸ್ಯರ ಹೆಸರು | : | ಶ್ರೀ ಪ್ರತಾಪ್ ಸಿಂಹ ನಾಯಕ್. ಕೆ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 06-12-2023 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | 2019 ರ ಮಹಾ ಪ್ರವಾಹಕ್ಕೆ ಜರ್ಜರಿತವಾಗಿದ್ದ ಚಾರ್ಮಡಿ ಘಾಟ್ ರಸ್ತೆಯನ್ನು ಸಂಪೂರ್ಣವಾಗಿ ಅಭಿವೃದ್ಧಿ ಪಡಿಸಲಾಗಿದೆಯೇ; | ರಾಷ್ಟ್ರೀಯ ಹೆದ್ದಾರಿ-73(234)ರ ಕಿ.ಮೀ.75.00 ರಿಂದ 99.200 ರ ನಡುವಿನ ಚಾರ್ಮಡಿ ಘಾಟ್ ಭಾಗವು (ಚಾರ್ಮಡಿ ದಕ್ಷಿಣ ಕನ್ನಡ-ಚಿಕ್ಕಮಗಳೂರ ಗಡಿಯಿಂದ-ಕೊಟ್ಟಿಗೆಹಾರದ ವರೆಗೆ) ರಾಷ್ಟ್ರೀಯ ಹೆದ್ದಾರಿ ವಲಯದ ಕಾರ್ಯ ವ್ಯಾಪ್ತಿಗೆ ಒಳಪಡುತ್ತದೆ. 2019ನೇ ಸಾಲಿನಲ್ಲಿ ಸಂಭವಿಸಿದ ಮಹಾ ಪ್ರವಾಹದಿಂದ ಚಾರ್ಮುಡಿ ಘಾಟ್ ಭಾಗದಲ್ಲಿ ಸುಮಾರು 104 ಸ್ಥಳಗಳಲ್ಲಿ ಗುಡ್ಡ ಕುಸಿತಗಳು ಹಾಗೂ 39 ಸ್ಥಳಗಳಲ್ಲಿ ಕಣಿವೆ ಬದಿಯಲ್ಲಿ ಕುಸಿತಗಳು ಉಂಟಾಗಿರುತ್ತದೆ. ಸದರಿ ಗುಡ್ಡಕುಸಿತಗಳನ್ನು ಮತ್ತು ಕಣಿವೆ ಬದಿ ಕುಸಿತಗಳನ್ನು 6 ಸ್ಥಳಗಳಲ್ಲಿ (ಕಿ.ಮೀ 91.500, 93.050, 93.150, 94.050, 94.550 ಮತ್ತು ಕಿ.ಮೀ 95.700) ಕುಸಿತಗಳು ತೀವ್ರವಾಗಿದ್ದ ಕಾರಣ ಸದರಿ ಭಾಗವನ್ನು ಹೊರತುಪಡಿಸಿ ಉಳಿದ ಎಲ್ಲಾ ಸ್ಥಳಗಳಲ್ಲಿ 2019-20 ರ ಪ್ರವಾಹ ಹಾನಿ ದುರಸ್ಥಿ ಅಡಿಯಲ್ಲಿ ಕಾಮಗಾರಿಗಳನ್ನು ಕೈಗೊಂಡು ಹೆದ್ದಾರಿಯನ್ನು ವಾಹನ ಸಂಚಾರಕ್ಕೆ ಯೋಗ್ಯವಾಗಿರಿಸಲಾಗಿರುತ್ತದೆ.<br><br>ಮುಂದುವರೆದು, ಮೇಲೆ ತಿಳಿಸಿರುವಂತೆ ಉಳಿಕೆ 6 ಸ್ಥಳಗಳಲ್ಲಿ ತಜ್ಞರ ಸಲಹೆಯಂತೆ Soil Nailing ತಂತ್ರಜ್ಞಾನದಿಂದ ಕಾಮಗಾರಿಯನ್ನು ಕೈಗೊಳ್ಳುವ ಮೂಲಕ ಸರಿಪಡಿಸಲು ಕೇಂದ್ರ ಭೂ ಸಾರಿಗೆ ಮಂತ್ರಾಲಯದಿಂದ "Providing permanent restoration to valley side slips occurred during monsoon of 2019-20 by soil nailing with tie back system to RCC retaining walls from Km 86.200 to 99.200 (Charmadi ghat) of NH-73(old NH-234), Mangalore-Tumkur section on EPC mode (Job No NH-73-KNT-2019-20-904)" ಕಾಮಗಾರಿಗೆ ಅನುಮೋದನೆ ಪಡೆದು, ಟೆಂಡರ್ ಮುಖಾಂತರ M/s AECS Engineering & Geotechnical Services Private Limited, Noida, ಇವರಿಗೆ ಕಾಮಗಾರಿಯನ್ನು ನಿರ್ವಹಿಸಲು ಗುತ್ತಿಗೆಯನ್ನು ನೀಡಲಾಗಿರುತ್ತದೆ. ಪ್ರಸ್ತುತ, 83% ಕಾಮಗಾರಿ ಭೌತಿಕ ಪ್ರಗತಿ ಹೊಂದಿದ್ದು, ಉಳಿಕೆ ಕಾಮಗಾರಿ ಪ್ರಗತಿಯಲ್ಲಿದೆ. |

| | | |
|---|---|---|
| (ಆ) | ಕಳೆದ 3 ವರ್ಷಗಳಲ್ಲಿ ಸದರಿ ರಸ್ತೆಯ ಅಭಿವೃದ್ಧಿಗೆ ಕೈಗೊಂಡಿರುವ ಕಾಮಗಾರಿಯ ವಿವರಗಳೇನು? ಎಷ್ಟು ಹಂತದ ಕಾಮಗಾರಿ ಈಗಾಗಲೇ ಪೂರ್ಣಗೊಂಡಿವೆ; ಮತ್ತು ವಿವಿಧ ಹಂತದ ಕಾಮಗಾರಿಗೆ ವಿನಿಯೋಗಿಸಿರುವ ಅನುದಾನದ ವಿವರ ಮತ್ತು ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗೆ ವಿನಿಯೋಗಿಸಿರುವ ಅನುದಾನದ ವಿವರ ಮತ್ತು ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳ ವಿವರಗಳೊಂದಿಗೆ ಮಾಹಿತಿ ನೀಡುವುದು; | ಕಳೆದ 3 ವರ್ಷಗಳಲ್ಲಿ ರಾಷ್ಟ್ರೀಯ ಹೆದ್ದಾರಿ–73 ರ ಕಿ.ಮೀ 75.00 ರಿಂದ 99.200 ರ ನಡುವಿನ ಚಾರ್ಮಡಿ ಘಾಟ್‌ನ ರಸ್ತೆಯ ಅಭಿವೃದ್ಧಿಗೆ ರಾಷ್ಟೀಯ ಹೆದ್ದಾರಿ ವಲಯದ ವತಿಯಿಂದ ಕೈಗೊಂಡಿರುವ ಕಾಮಗಾರಿಗಳ ಪ್ರಸ್ತುತ ಹಂತ, ಅಂದಾಜು ಮೊತ್ತ, ಆರ್ಥಿಕ ವರ್ಷ ಮಾಹಿತಿಗಳನ್ನು ಒಳಗೊಂಡಂತೆ ವಿವರಗಳನ್ನು ಪ್ರತ್ಯಕವಾಗಿ ಅನುಬಂಧ–1 ರಲ್ಲಿ ಲಗತ್ತಿಸಿದೆ. |
| ಇ) | ಚಾರ್ಮಡಿ ಹಳ್ಳದಿಂದ ಘಾಟಿಯ 11 ನೇ ತಿರುವಿನವರೆಗೆ 11.2 ಕಿ.ಮೀ ವ್ಯಾಪ್ತಿಯ ರಸ್ತೆ ಅಭಿವೃದ್ಧಿ ಕಾಮಗಾರಿ ಪ್ರಗತಿ ಪ್ರಸ್ತುತ ಯಾವ ಹಂತದಲ್ಲಿದೆ. | ಕೇಂದ್ರ ಭೂ ಸಾರಿಗೆ ಮಂತ್ರಾಲಯದಿಂದ 2023–24ನೇ ಸಾಲಿನ ವಾರ್ಷಿಕ ಯೋಜನೆಯಡಿ "ರಾಷ್ಟ್ರೀಯ ಹೆದ್ದಾರಿ 73 ರ ಕಿ.ಮೀ.75.00 (ಚಾರ್ಮಾಡಿಹಳ್ಳ) ರಿಂದ ಕಿ.ಮೀ.86.200 (ದಕ್ಷಿಣ ಕನ್ನಡ ಜಿಲ್ಲಾ ಗಡಿ) ರವರೆಗೆ ರಸ್ತೆಯನ್ನು ದ್ವಿಪಥ ರಸ್ತೆಯನ್ನಾಗಿ ಅಗಲೀಕರಿಸುವ ಕಾಮಗಾರಿಗೆ ಅನುಮೋದನೆ ದೊರೆತಿರುತ್ತದೆ. ಸದರಿ ಕಾಮಗಾರಿಯಲ್ಲಿ "ಚಾರ್ಮಾಡಿ ಹಳ್ಳದಿಂದ ಘಾಟಿಯ 11ನೇ ತಿರುವಿನವರೆಗೆ" ಅಭಿವೃದ್ಧಿ ಒಳಗೊಂಡಿದ್ದು, ರೂ.353.41 ಕೋಟಿ ಮೊತ್ತದ ಅಂದಾಜು ಪಟ್ಟಿಯನ್ನು ಅನುಮೋದನೆಗಾಗಿ ಕೇಂದ್ರ ಭೂ ಸಾರಿಗೆ ಮಂತ್ರಾಲಯಕ್ಕೆ ಸಲ್ಲಿಸಲಾಗಿದೆ. ಅನುಮೋದನೆ ಸ್ವೀಕೃತವಾದ ನಂತರ ಕಾಮಗಾರಿಯನ್ನು ಕೈಗೊಳ್ಳಲಾಗುವುದು. |
| ಈ) | ಚಾರ್ಮಡಿ ಹಳ್ಳದಿಂದ ಘಾಟಿಯ 11ನೇ ತಿರುವಿನವರೆಗೆ 11.2 ಕಿ.ಮೀ. ವ್ಯಾಪ್ತಿಯ ರಸ್ತೆ ಅಭಿವೃದ್ಧಿ ಕಾಮಗಾರಿಗೆ ವಿನಿಯೋಗಿಸುತ್ತಿರುವ ಅನುದಾನದ ವಿವರ ಹಾಗೂ ಕೈಗೊಳ್ಳಲಿರುವ ಅಭಿವೃದ್ಧಿ ಕಾಮಗಾರಿಗಳ ವಿವರಗಳೊಂದಿಗೆ ಮಾಹಿತಿ ನೀಡುವುದು; | |
| ಉ) | ಸದರಿ ಕಾಮಗಾರಿಯನ್ನು ಯಾವ ಅವಧಿಯೊಳಗೆ ಮುಕ್ತಾಯಗೊಳಿಸಿ ಲೋಕಾರ್ಪಣೆಗೊಳಿಸಲಾಗುವುದು? | |

ಕಡತ ಸಂಖ್ಯೆ: ಲೋಇ 243 ಸಿಎನ್‌ಹೆಚ್ 2023 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು
**ಸತೀಶ ಜಾರಕಿಹೊಳಿ**
**ಲೋಕೋಪಯೋಗಿ ಸಚಿವರು**